## ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಃ ಕೋಲಾರ

**ಎಸ್.ಸಿ. ನಂಃ 01/2018**

ಪ್ರಾಸಾ ಃ 15 **(**ಚಾಸಾ ಃ 23 **)**

ಪ್ರಮಾಣೀಕರಿಸಿದ ದಿನಾಂಕಃ **19-07-2018**

ಹೆಸರು ಃ ಹೆಚ್‌ವಿ. ಲಿಂಗಯ್ಯ

ತಂದೆಯ ಹೆಸರು ಃ ವೆಂಕಟರಮಣಪ್ಪ

ವಯಸ್ಸು ಃ 53 ವರ್ಷ

ಕೆಲಸ ಃ ಎಎಸ್‌ಐ, ಗೌನಿಪಲ್ಲಿ ಠಾಣೆ

ವಾಸ ಃ ಗೌನಿಪಲ್ಲಿ

**ಮುಖ್ಯ ವಿಚಾರಣೆಃ- ಮಾನ್ಯ ವಿಶೇಷ ಪಿಪಿ ರವರಿಂದಃ**

ನಾನು 2017 ರಿಂದ ಮೇ 2018 ರವರೆಗೆ ಮುಳಬಾಗಿಲು ಠಾಣೆಯಲ್ಲಿ ಎಎಸ್‌ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿಃ 03-10-2017 ರಂದು ಬೆಳಿಗ್ಗೆ 7.00 ರಿಂದ 8.00 ರವರೆಗೆ ಕೋಲಾರದ ಜಾಲಪ್ಪ ಆಸ್ಪತ್ರೆಯಲ್ಲಿ ವೈರ್‌ಲೆಸ್ ಮುಖಾಂತರ ಓಪಿ ಠಾಣೆಯಿಂದ ಮಾಹಿತಿ ಬಂದಿದ್ದು, ನಾನು ಆಸ್ಪತ್ರೆಗೆ ಹೋಗಿ ನೊಂದ ಬಾಲಕಿಯ ಹೇಳಿಕೆಯನ್ನು ವೈದ್ಯರ ಮುಂದೆ ದಾಖಲಿಸಿಕೊಂಡು ಠಾಣೆಗೆ 9.00 ಗಂಟೆಗೆ ವಾಪಸ್ಸು ಬಂದು ಠಾಣಾ ಮೊ. ಸಂಖ್ಯೆಃ 220/2017 ರಲ್ಲಿ ಪ್ರಕರಣ ದಾಖಲಿಸಿ ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ರವಾನಿಸಿರುತ್ತೇನೆ. ದೂರಿನಲ್ಲಿರುವ ಸಹಿಯನ್ನು ನಿಪಿ 1 (ಬಿ) ಮತ್ತು ಪ್ರಥಮ ವರ್ತಮಾನ ವರದಿಯನ್ನು ನಿಪಿ 17 ಮತ್ತು ಸಹಿಯನ್ನು ನಿಪಿ 17(ಎ) ಎಂದು ಗುರ್ತಿಸಲಾಯಿತು. ಸದರಿ ಪ್ರಕರಣ ಘೋರ ಪ್ರಕರಣ ಆಗಿರುವುದರಿಂದ ಮುಂದಿನ ತನಿಖೆಯನ್ನು ಸಿಪಿಐ ರವರಿಗೆ ನೀಡಿರುತ್ತೇನೆ.

**ಪಾಟೀ ಸವಾಲುಃ- ಆರೋಪಿಗಳ ಪರ ಶ್ರೀ. ಎಂಎಂಜಿ ವಕೀಲರಿಂದ ಃ-**

ನನಗೆ ಯಾವುದೇ ವೈರ್‌ಲೆಸ್ ಮೆಸೇಜ್ ಬಂದಿಲ್ಲ ಎಂದರೆ ಸರಿಯಲ್ಲ, ಈ ಪ್ರಕರಣದ ನೊಂದಬಾಲಕಿಂಯ ಹೇಳಿಕೆಯನ್ನು ನಾನು ಪಡೆದಿಲ್ಲ ಎಂದರೆ ಸರಿಯಲ್ಲ, ನಾನು ಯಾವುದೇ ಕೇಸನ್ನು ದಾಖಲಿಸಿಲ್ಲ ಎಂದರೆ ಸರಿಯಲ್ಲ, ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ,

**ಮರುವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ.)**

ಓದಿ ಹೇಳಿ ಕೇಳಿ ಸರಿ ಇದೆ.

(ಬಿ.ಎಸ್. ರೇಖ)
2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೋಲಾರ.

## ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಃ ಕೋಲಾರ

**ಎಸ್.ಸಿ. ನಂಃ 01/2018**

ಪ್ರಾಸಾ ಃ 16 **(**ಚಾಸಾ ಃ 19 **)**

ಪ್ರಮಾಣೀಕರಿಸಿದ ದಿನಾಂಕಃ **19-07-2018**

ಹೆಸರು ಃ ಶ್ರೀನಿವಾಸ್.ವಿ.

ತಂದೆಯ ಹೆಸರು ಃ ವೆಂಕಟೇಶಪ್ಪ

ವಯಸ್ಸು ಃ 49 ವರ್ಷ

ಕೆಲಸ ಃ ಹೆಚ್‌ಸಿ 07, ಮುಳಬಾಗಿಲು ಗ್ರಾಮಾಂತರ ಠಾಣೆ

ವಾಸ ಃ ಮುಳಬಾಗಿಲು

**ಮುಖ್ಯ ವಿಚಾರಣೆಃ- ಮಾನ್ಯ ವಿಶೇಷ ಪಿಪಿ ರವರಿಂದಃ**

ನಾನು ಡಿಸೆಂಬರ್ 2016 ರಿಂದ ಇಲ್ಲಿಯವರೆಗೆ ಮೇಲಿನ ಠಾಣೆಯಲ್ಲಿ ಹೆಚ್‌ಸಿ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ದಿಃ 03-10-2017 ರಂದು ಈ ಪ್ರಕರಣಕ್ಕೆ ಆರೋಪಿತರ ಪತ್ತೆಗಾಗಿ ನನ್ನನ್ನು ಮತ್ತು ಪೇದೆ 311 ಪ್ರಶಾಂತ್ ರವರನ್ನು ನೇಮಿಸಿದ್ದು, ಅದರಂತೆ ನಾವು 2.00 ಗಂಟೆಗೆ ಬೆಟ್ಟಗೇರನಹಳ್ಳಿ ಗ್ರಾಮಕ್ಕೆ ಹೋಗಿ ಆರೋಪಿ ತಲಾಶ್ ಮಾಡುತ್ತಿದ್ದಾಗ ಆರೋಪಿ ಮುನಿರಾಜು ಸಿಕ್ಕಿದ್ದು ಅವರನ್ನು ವಶಕ್ಕೆ ಪಡೆದು 3.00 ಗಂಟೆಗೆ ತನಿಖಾಧಿಕಾರಿಯ ಮುಂದೆ ಹಾಜರುಪಡಿಸಿ ವರದಿ ನೀಡಿದ್ದು, ಅದನ್ನು ನಿಪಿ 18 ಮತ್ತು ಸಹಿಯನ್ನು ನಿಪಿ 18(ಎ) ಎಂದು ಗುರ್ತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ ಆರೋಪಿ ಮುನಿರಾಜು ನನ್ನು ಸಾಕ್ಷಿ ಗುರ್ತಿಸುತ್ತಾರೆ

**ಪಾಟೀ ಸವಾಲುಃ- ಆರೋಪಿಗಳ ಪರ ಶ್ರೀ. ಎಂಎಂಜಿ ವಕೀಲರಿಂದ ಃ-**

ನನ್ನನ್ನು ಆರೋಪಿ ಪತ್ತೆಗಾಗಿ ನೇಮಿಸಿರಲಿಲ್ಲ ಎಂದರೆ ಸರಿಯಲ್ಲ. ನಾವು ಬೆಟ್ಟಗೇರನಹಳ್ಳಿಗೆ ಹೋಗಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿ ಮುನಿರಾಜುನನ್ನು ಇದೇ ಮೊದಲ ಬಾರಿಗೆ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ ಇಲ್ಲ</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ.)**

ಓದಿ ಹೇಳಿ ಕೇಳಿ ಸರಿ ಇದೆ.

**(ಬಿ.ಎಸ್. ರೇಖ)**
2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೋಲಾರ.